**ಕರ್ನಾಟಕ ಸರ್ಕಾರ**

**ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ಇವರು ಹೊರಡಿಸಿದ ನಡವಳಿಗಳು**

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ಪ್ರಕರಣದಲ್ಲಿ ದಿನಾಂಕ: 09-02-2017ರ ತೀರ್ಪಿನ ಹಿನ್ನೆಲೆಯಲ್ಲಿ ಅಧೀಕ್ಷಕರು ದರ್ಜೆ-1 ವೃಂದದ ಅಧಿಕಾರಿಗಳ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:

1 ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾನಿಯಮ-1), ಸಿಆಸುಇ/ 182/ ಸೇನೆನಿ/2011, ದಿನಾಂಕ:06.05.2017.

2. ನೇಮಕಾತಿ ಆದೇಶ ದಿನಾಂಕ:16.09.1985, 23.04.1999, 19.07.2002, 03.05.2008, 16.05.2008, 28.08.2014.

3. ಮುಂಬಡ್ತಿ ಆದೇಶ ದಿನಾಂಕ: 02.01.2008, 18.06.2016, 31.03.2016

4. ಅಧೀಕ್ಷಕರು ದರ್ಜೆ-1 ವೃಂದದ ಅಧಿಕಾರಿಗಳ ದಿನಾಂಕ 01.01.2006. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ:ಮಮಇ/427/ಎಸ್‌ಜೆಡಿ/2006 ದಿನಾಂಕ: 31.10.2007.

5. ಅಧೀಕ್ಷಕರು ದರ್ಜೆ-1 ವೃಂದದ ಅಧಿಕಾರಿಗಳ ದಿನಾಂಕ 01.01.2013. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶಸಂಖ್ಯೆ:ನಿಮಅಇ/ಜೇಷ್ಠತ/14/ಪ.ದರ್ಜೆ-1/7/2014-15, ದಿನಾಂಕ:09.12.2014.

6. ಅಧೀಕ್ಷಕರು ದರ್ಜೆ-1 ವೃಂದದ ಅಧಿಕಾರಿಗಳ ದಿನಾಂಕ 01.01.2015. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶಸಂಖ್ಯೆ:ಮಮಅಇ/ಜೇಷ್ಠತ/ಅಧೀ-1/31/2015-16, ದಿನಾಂಕ:24.08.2015.

7. ಅಧೀಕ್ಷಕರು ದರ್ಜೆ-1 ವೃಂದದ ಅಧಿಕಾರಿಗಳ ದಿನಾಂಕ 01.01.2016. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ:ಮಮಅಇ/ಜೇಷ್ಠತ/ಅಧೀ-1/28/16-17, ದಿನಾಂಕ:24.12.2016.

ಪ್ರಸ್ತಾವನೆ: ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ 2368/2011 ಬಿ.ಕೆ. ಪವಿತ್ರ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ:09.02.2017 ರಂದು ನೀಡಿರುವ ತೀರ್ಪಿನಲ್ಲಿ ರಾಜ್ಯ ಸರ್ಕಾರದ ನಾಗರೀಕ ಸೇವೆಗಳನ್ನು "Karnataka Determination of Seniority of Govt servants promoted on the basis of Reservation Act 2002" ರ ಸೆಕ್ಷನ್ 3 ಮತ್ತು 4ನ್ನು ಸಂವಿಧಾನದ ಅನುಚ್ಛೇಧ 14 ಮತ್ತು 16 ನ್ನು ಅಧಿಕಾರಾತೀತ (ultra vires) ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ(1)ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ನೀಡಿರುವ ಮುಂಬಡ್ತಿಗಳಲ್ಲಿ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ನೌಕರರಿಗೆ ಮೀಸಲಾತಿ ಅನುಸರಿಸಿರುವ ಅಧಿಕಾರಿಗಳ/ನೌಕರರ ಜೇಷ್ಠತಾ ಪಟ್ಟಿಗಳನ್ನು ಪುನರ್‌ಪರಿಶೀಲಿಸಲು ಆದೇಶಿಸಲಾಗಿದೆ. ಅದರಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ಹೊರಡಿಸಲಾಗಿರುವ ಅಧಿಕಾರಿ/ನೌಕರರ ಜೇಷ್ಠತೆ ಪುನರ್ ಪರಿಶೀಲಿಸಿ, ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಬೇಕಿದೆ. ಪುನರ್‌ಪರಿಶೀಲನೆ ಕಾರ್ಯ ಕೈಗೊಳ್ಳಲು ಇಲಾಖೆಯಲ್ಲಿ ಈ ಹಿಂದೆ ಪ್ರಕಟಿಸಲಾದ ಮತ್ತು ಲಭ್ಯವಿರುವ ಉಲ್ಲೇಖ (2)ರ ನೇಮಕಾತಿ ಆದೇಶಗಳು,